# ಪ್ರಸ್ತಾವನೆ.

ಈಗಿನ ಗ್ರಂಥವು ನಾವು ಈ ಮೊದಲು ಅಚ್ಚು ಹಾಕಿದ 'ವಚನಗಾಯನ'ದ ಎರಡನೆಯ ಆವೃತ್ತಿಯು ಇರುತ್ತದೆ. ಮೊದಲನೆಯ ಆವೃತ್ತಿಯನ್ನು ನಾವು ಶ್ರೀ. ಪಿ. ವ್ಹಿ. ಪಾಟೀಲ ಗಾಯನ ಮಾಸ್ತರ ಮುನಸಿಪಲ್ ಕನ್ನಡ ಶಾಲೆ ವಿಜಾಪೂರ. ಮತ್ತು ಶ್ರೀಯುತ ವ್ಹಿ. ಬಿ. ಪುರಾಣಿಕ ಬಿ. ಎ. ನಿವೃತ್ತ ಹೆಡ್ ಮಾಸ್ತರ ಶ್ರೀ. ಸಿದ್ದೇಶ್ವರ ಹಾಯಸ್ಕೂಲ ವಿಜಾಪುರ, ಇವರ ನಿರೀಕ್ಷಣೆಯಲ್ಲಿ ಸಿದ್ಧಪಡಿಸಿದೆವು. ಈಜೆಗೆ ವಚನಗಾಯನವು ಜನಪ್ರಿಯವಾಗಹತ್ತಿರುತ್ತದೆ. ಆದ್ದರಿಂದ ನಾವು ಈ ಎರಡನೆಯ ಆವೃತ್ತಿಯನ್ನು ಹೊರಡಿಸಿದ್ದೇವೆ. ಇದರಲ್ಲಿಯ ಪದ್ಯಗಳು ಮೊದಲನೆಯ ಆವೃತ್ತಿಯಂತೆಯೇ ಇರುತ್ತವೆ.

ವಿಜಾಪುರ.
ತಾ. ೧೮-೮-೫೪

ಫ. ಗು. ಹಳಕಟ್ಟಿ.
ಸಂಪಾದಕ.
ಶಿವಾನುಭವ.

780
4303

ಸಂಗೀತದಲ್ಲಿ

# ಶಿವಶರಣರ ವಚನಗಳು.

(೧)

ಭೀಮಪಲಾಸ—ತಾಳ ಏಕ ತಾಲ.

(ತಿಮಿರ ಪಟಲ ಎಂಬಂತೆ)

ಗಿರಿಯಲ್ಲದೆ ಹುಲ್ಲು ಮೊರಡಿ । ಯಲ್ಲಾಡುವುದೇ ನವಿಲು । ಕೊಳನಲ್ಲದೆ। ಕಿರಿವಳ್ಳಕ್ಕೆಳಸುವುದೆ ಹಂಸೆ ॥ಪ॥

ಮಾಮರ ತಳಿತಲ್ಲದೆ । ಸ್ವರಗೈವುದೆ ಕೋಗಿಲೆ । ಪರಿಮಳವಿಲ್ಲದ ಪುಷ್ಪ । ಕ್ಕೆಳಸುವುದೆ ಭ್ರಮರ ॥೧॥

ಎನ್ನಯ ದೇವ ಚೆನ್ನ । ಮಲ್ಲಿಕಾರ್ಜುನನಲ್ಲದೆ । ಅನ್ಯಕ್ಕೆಳಸುವುದೆ ಎನ್ನ। ಮನ ಕೇಳಿರೆ ಕೆಳದಿಯರಾ ॥೨॥

(೨)

ರಾಗಃ— ದುರ್ಗಾ. ತಾಲ:— ತ್ರಿತಾಲ.

(ಪ್ರೀತೀಮೇ ಮನ ಎಂಬಂತೆ)

ಬೆಟ್ಟದ ಮೇಲೊಂದು ಮನೆಯ ಮಾಡಿ। ಮೃಗಂಗಳಿಗಂಜ । ದಡೆ ಎಂತಯ್ಯ ॥ಪಲ್ಲ॥

ಸಮುದ್ರದ ತಡೆಯಲ್ಲಿ । ಮನೆಯ ಮಾಡಿ । ನೊರೆ ತೆರೆಗಳಿಗಂಜ । ದಡೆ ಎಂತಯ್ಯ ॥೧॥

ಸಂತೆಯೊಳಗೊಂದು । ಮನೆಯ ಮಾಡಿ । ಶಬ್ದಕ್ಕೆ
ನಾಚಿದಡೆ । ಎಂತಯ್ಯ ॥೨॥

ಚೆನ್ನಮಲ್ಲಿಕಾರ್ಜುನ । ದೇವ ಕೇಳಯ್ಯ । ಲೋಕ
ದೊಳಗೆ ಹು । ಟ್ಟಿರ್ದ ಬಳಿಕ ॥೩॥

ಸ್ತುತಿ ನಿಂದೆಗಳು। ಬಂದಡೆ ಮನದಲ್ಲಿ । ಕೋಪವ
ತಾಳದೆ । ಸಮಾಧಾನಿಯಾಗಿರು ॥೪॥

(೩)

ರಾಗಃ— ಮುಲ್ತಾನಿ ತಾಲ:— ಏಕತಾಲ
(ಗೋವಿಂದಸೋ........ಎಂಬಂತೆ)

ಬಂಜೆಯು । ಬೇನೆಯನರಿಯಳು ।
ಬಲತಾಯಿ ಮುದ್ದು ಬಲ್ಲಳೇ ॥ಪಲ್ಲ॥

ನೊಂದ ನೋವ ನೋಯದವರು ।
ಎತ್ತ ಬಲ್ಲರೌ ತಾಯೇ ॥೧॥

ಚೆನ್ನಮಲ್ಲಿಕಾರ್ಜುನ ನೀ ।.
ನಿರಿದಲಗೊಡಲಲ್ಲಿ ಮುರಿದು ॥೨॥

ಹೊರಳುವಳ ನೀವೆತ್ತ ।
ಬಲ್ಲಿರೆ ಎಲೆ ತಾಯಿಗಳಿರಾ ॥೩॥



(೪)

ರಾಗ:— ದೇಸಕರ ತಾಲ:— ತ್ರಿತಾಲ
(ಸದಾಕಲಹಾವಿನಾ ಎಂಬಂತೆ)

ಚಂದನವ ಕಡಿದು ಕೊರೆದು । ತೇದೊಡೆ ।
ನೊಂದೆನೆಂದು ಕಂಪ ಬಿಟ್ಟಿತ್ತೆ ॥ಪಲ್ಲ॥

ತಂದು ಸುವರ್ಣವ ಕಡಿದೊರೆದೊಡೆ ಬೆಂದು ।
ಕಳಂಕ ಹಿಡಿದಿತ್ತೆ ಸಂದು ಸಂದು ಕಡಿದ ।
ಕಬ್ಬನು ಗಾಣದಲಿಕ್ಕಿ ಬೆಂದು ॥೧॥

ಪಾಕಾಗುಳ್ಳ ಸಕ್ಕರೆಯಾಗಿ ನೊಂದೆ ।
ನೆಂದು ಸವಿಯ ಬಿಟ್ಟಿತ್ತೆ ನಾ ಹಿಂದೆ ।
ಮಾಡಿದ ಹೀನಂಗಳೆಲ್ಲವ ತಂದು ॥೨॥

ಮುಂದೆ ಇಳುಹಲು ನಿಮಗೆ ಹಾನಿಯೇ ।
ಎನ್ನಯ ತಂದೆ ಚೆನ್ನಮಲ್ಲಿಕಾರ್ಜುನ ।
ದೇವಯ್ಯ ಕೊಂದೊಡೆ ಶರಣೆಂಬುದ ಮಾಣೆ ॥೩॥

(೫)

ರಾಗಃ- ಯಮನ. ತಾಲಃ- ತ್ರಿತಾಲ.
(ಲಾಗೆ ಹೃದಯಿ ಎಂಬಂತೆ)

ವನವೆಲ್ಲ ನೀವೆ ವನದೊಳಗಣ । ದೇವ ॥
ತರುವೆಲ್ಲ ನೀವೆ । ತರುವಿನೊಳಗಾಡುವ ॥ಪಲ್ಲ॥

ಖಗಮೃಗವೆಲ್ಲ ನೀವೆ । ಚೆನ್ನ ಮಲ್ಲಿಕಾರ್ಜುನ । ಸರ್ವ ಭರಿತನಾಗಿ । ಎನಗೆ ಮುಖದೋರ ॥೧॥

(೬)

ರಾಗ:— ಭೂಪ. ತಾಲ:— ತ್ರಿತಾಲ.

(ತುಮ ಹಮ ಸಂಗ ಜಿನ ಎಂಬಂತೆ.)

ವೃಕ್ಷಾಶ್ರಿತನಾಗಿರ್ದೊಡೇನು । ಭಿಕ್ಷಾಹಾರಿಯಾಗಿರ್ದೊಡೇನು ॥ಪಲ್ಲ॥

ಉಟ್ಟುದ ತೊರೆದು ಬತ್ತಲೆಯಾಗಿರ್ದೊಡೇನು । ಕಾಲವಿರಹಿತನಾದೊಡೇನು। ಕರ್ಮವಿರಹಿತನಾದೊಡೇನು ॥೧॥

ನಮ್ಮ ಕೂಡಲ ಚನ್ನ ಸಂಗಯ್ಯನನು। ಭಾವವನರಿಯದವರು ಏಸು ಕಾಲ । ಇರ್ದೊಡೆಯು ವೃಥಾ ವೃಥಾ ಕಾಣಿರೊ ॥೨॥

(೭)

ರಾಗ:— ಪಟದೀಪ. ತಾಲ:— ತ್ರಿತಾಲ.

(ಕುಸುಮಾಂಜಲಿ ವಾಹಿಲೀ ಎಂಬಂತೆ.)

ದಯವಿಲ್ಲದ ಧರ್ಮವು । ಆವುದಯ್ಯ । ದಯವೇ ಬೇಕು ಸಕಲ । ಪ್ರಾಣಿಗಳೆಲ್ಲರಲ್ಲಿ ॥ಪಲ್ಲ॥



ದಯವೇ ಧರ್ಮದ ಮೂಲವಯ್ಯ । ಕೂಡಲ ಸಂಗಯ್ಯ । ನಂತಲ್ಲದೊಲ್ಲನಯ್ಯ ॥೧॥

(೮)

ರಾಗ:— ತಿಲಕಕಾಮೋದ. ತಾಲ:— ಝಪತಾಲ.

(ತೀರಥಕೋ ಸಬ ಕರೀ ಎಂಬಂತೆ.)

ಹಗೆಯಲ್ಲಿ ಬಿದ್ದವರ। ಮೇಲೆ ಒರಳ ನೂಂಕುವರೆ । ಕೊಳದ ಮೇಲೆ ಸಂಕೊಲೆಯ। ನಿಕ್ಕುವರೆ ಚೆಂದ ಹುಣ್ಣ ॥ಪಲ್ಲ॥

ಕಂಬಿಯಲ್ಲಿ ಕೀಸುವರೆ। ಕೂಡಲಸಂಗಯ್ಯ ಕಾಡುವ। ಕಾಟ ಸಿರಿಯಾಳಂಗಲ್ಲದೆ ಸೈರಿಸಬಹುದೆ ॥೧॥

(೯)

ರಾಗ:— ಬಿಹಾಗ ತಾಲ:— ತ್ರಿತಾಲ.

(ಸತ್ಯ ಸತ್ಯ ಸಚ ಎಂಬಂತೆ.)

ಕಾಯಕದಲ್ಲಿ ನಿರುತ । ನಾದಡೆ। ಗುರುದರ್ಶನವಾದಡೂ ಮರೆಯಬೇಕು ॥ಪಲ್ಲ॥

ಲಿಂಗ ಪೂಜೆಯಾದಡೂ। ಮರೆಯಬೇಕು। ಜಂಗಮ ಮುಂದಿದ್ದಡೂ । ಹಂಗು ಹರಿಯಬೇಕು ॥೧॥

ಕಾಯಕವೇ ಕೈಲಾ । ಸವಾದ ಕಾರಣ । ಅಮಳೇಶ್ವರ ಲಿಂಗ । ವಾಯ್ತಾದಡು ಕಾಯಕದೊಳು ॥೨॥

(೧೦)

ರಾಗಃ— ಬಾಗೇಶ್ರೀ. ತಾಲಃ— ಝುಂಪತಾಲ.

(ಆತಾ ರಾಗದೇ ಎಂಬಂತೆ.)

ಆತ್ಮ ಸ್ತುತಿ ಪರನಿಂದೆಯ । ಕೇಳಿಸದಿರಯ್ಯ ।
ನಿಮ್ಮ ಧರ್ಮ ಆನು ಭಕ್ತನೆನ್ನಲ್ಲಿ ಲೇಸುಂಟೆಂದು ಪರಿಣಮಿ
ಸಿದರೆ ॥ಪಲ್ಲ॥

ನಿಮಗಾನು ದ್ರೋಹಿಯಯ್ಯ । ಕೂಡಲಸಂಗನು
ದೇವಾ। ನಿಮ್ಮ ಶರಣರ ಲೇಸೇ। ಎನ್ನಯ ಲೇಸಯ್ಯ॥೧॥

(೧೧)

ರಾಗಃ— ಕಾಫೀ. ತಾಲಃ— ತ್ರಿತಾಲ.

(ಅಸಿ ಫಾಲಗಳಾ ಎಂಬಂತೆ.)

ಆಡಿ ಅಳುಪದಿರಾ ಲೇಸ ಮಾಡಿ । ಮರುಗದಿರಾ ।
ಕಂಡ್ಯಾ । ಎಲೆ ಮನವೇ ಕೂಡಿ ತಪ್ಪದಿರಾ ॥ಪಲ್ಲ॥

ಬೇಡಿದವರಿಗೆ । ಇಲ್ಲೆನ್ನದಿರಾ । ನಾಡ ಮಾತು
ಬೇಡ। ಸೆರಗೊಡ್ಡಿ ಬೇಡು। ಕೂಡಲಸಂಗನ ಶರಣರ ॥೧॥

(೧೨)

ರಾಗಃ — ಭೈರವೀ. ತಾಲಃ— ದಾದರಾ.

(ವೀರಶೈವಾಚಾರ ಪರಾ ಎಂಬಂತೆ)

ಎನಗಿಂದ । ಕಿರಿಯರಿಲ್ಲ ।
ಶಿವಭಕ್ತರಿಗಿಂದ । ಹಿರಿಯರಿಲ್ಲ ॥ಪಲ್ಲ॥



ನಿಮ್ಮ ಪಾದವೇ ಸಾಕ್ಷಿ। ಎನ್ನ ಮನವೇ ಸಾಕ್ಷಿ।
ಕೂಡಲಸಂಗಮದೇವ। ಎನಗಿದೇ ದಿಬ್ಯ ॥೧॥

(೧೩)

ರಾಗಃ— ಪಹಾಡಿ. ತಾಲಃ— ಕವಾಲಿ.

(ದಾನತ ಯೇಯಿಸಖ್ಯಾ ಎಂಬಂತೆ)

ಆಶೆಯಿಂದ ಬಿಟ್ಟು । ಕಿರಿಯರಿಲ್ಲ ।
ನಿರಾಶೆಯಿಂದ ಬಿಟ್ಟು । ಹಿರಿಯರಿಲ್ಲ ॥ಪಲ್ಲ॥

ದಯದಿಂದ ಬಿಟ್ಟು । ಧರ್ಮವಿಲ್ಲ ।
ವಿಚಾರದಿಂದ ಬಿಟ್ಟು । ಸಹಾಯಿಗಳಿಲ್ಲ ॥೧॥

ಸಭ್ಯರಾಚಾರಕ್ಕೆ । ಸಕಳೇಶ್ವರ ।
ದೇವರಿಂದ ಬಿಟ್ಟು। ದೈವವಿಲ್ಲ ॥೨॥

(೧೪)

ರಾಗಃ— ಆನಂದಭೈರವಿ ತಾಲಃ— ಆದಿತಾಲ

(ಕರ್ನಾಟಕೀ ನಯನೀತಿಹೀ)

ಸಾವು ತಡವಿಲ್ಲ । ನರಕ ದೂರವಿಲ್ಲ ।
ದೇಹದಿಚ್ಛೆಗೆ ಹರಿದು। ಕೆಮ್ಮನೆ ಕೆಡಬೇಡ ॥ಪ॥

ಮರ್ವಿಷಯವ ಬಿಡುಬೇಗ । ಗುರುಪದವ ನಂಬು ।
ಸಿಮ್ಮಲಿಗೆಯ ಚನ್ನರಾಮ । ನಲ್ಲಿ ಸುಖಿಯಪ್ಪೆ ॥೧॥

(೧೫)

ರಾಗಃ— ಅಡಾಣಾ ತಾಲಃ — ತ್ರಿತಾಲ

(ಕೋನಖಬರಿಯಾ ಎಂಬಂತೆ)

ನಾಳೆ ಬಪ್ಪುದೆಮಗೆ । ಇಂದೇ ಬರಲಿ ।
ಇದಕಾರಂಜುವರು । ಇದಕಾರಳುಕುವರು ।
ಜಾತಸ್ಯ ಮರಣಂ ಧೃವಂ । ಎಂದುದಾಗಿ ||ಪ||
ನಮ್ಮ ಕೂಡಲ । ಸಂಗಮದೇವ । ಬರೆದಬರಹನ ।
ತಪ್ಪಿಸುವರೆ ಹರಿ । ಬ್ರಹ್ಮಾದಿಗಳವಲ್ಲ ||೧||

(೧೬)

ರಾಗಃ — ಜೀವನಪುರಿ ತಾಲಃ — ತ್ರಿತಾಲ

(ಕೋನ ಖಬರಿಯಾ ಎಂಬಂತೆ)

ಕತ್ತೆ ಬಲ್ಲುದೆ ಕತ್ತುರಿಯ ವಾಸನೆ ।
ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ ||ಪ||
ಭಕ್ತಿಯನರಿಯದ ವ್ಯರ್ಥ ಜೀವಿಗಳು ।
ನಿಮ್ಮನೆತ್ತ ಬಲ್ಲರೈ ರಾಮನಾಥಾ ||೧||

(೧೭)

ರಾಗಃ— ಯಮುನ ತಾಲಃ ಏಕತಾಲ

(ಜನಮಾನಸ ಎಂಬಂತೆ)

ಎಡದ ಪಾದದಲೊದ್ದರೆ । ಬಲದ ಪಾದನ ಹಿಡಿವೆ ।
ಬಲದ ಪಾದದಲೊದ್ದರೆ । ಎಡದ ಪಾದನ ಹಿಡಿವೆ ||ಪ||



ತ್ರಾಹಿ ತ್ರಾಹಿ ತಪ್ಪೆನ್ನದು । ಕ್ಷಮೆ ನಿಮ್ಮದು
ಕೂಡಲ । ಸಂಗಮದೇವ ನಿಮ್ಮ । ಕರುಣದ ಕಂದ
ನಾನು ||೧||

(೧೮)

ರಾಗಃ — ಭೀಮಪಲಾಸ ತಾಳಃ— ತ್ರಿತಾಲ.

(ಭೂಷಣ ಸಂಸಾರಾ ಎಂಬಂತೆ)

ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ ।
ಧರೆಹತ್ತಿ ಉರಿದರೆ ನಿಲ್ಲಬಾರದು||ಪಲ್ಲ||
ಏರಿ ನೀರುಂಬರೆ । ಬೇಲಿ ಕೆಯಿಮೇವರೆ । ನಾರಿ
ತನ್ನಯ । ಮನೆಯಲ್ಲಿ ಕಳವರೆ ||೧||
ತಾಯಿ ಮೊಲೆವಾಲು । ನಂಜಾಗಿ ಕೊಲುವರೆ ।
ಇನ್ನಾರಿಗೆ ದೂರುವೆನಯ್ಯ । ಕೂಡಲಸಂಗಮದೇವ ||೨||

(೧೯)

ರಾಗಃ— ತಾಲಃ— ತ್ರಿತಾಲ.

(ಪ್ರಾಣಹರಾ ಎಂಬಂತೆ)

ತನಗೆ ಮುನಿವರಗೆ । ತಾ ಮುನಿಯಲೇಕಯ್ಯ ।
ಅವರಿಗಾದಡೇನು । ತನಗಾದಡೇನು ||ಪಲ್ಲ||
ತನುವಿನ ಕೋಪ । ತನ್ನ ಹಿರಿಯ ತನದ ಕೇಡು ।
ಮನದ ಕೋಪ । ತನ್ನ ಅರುವಿನ ಕೇಡು ||೧||

ಮನೆಯೊಳಗಣ ಕಿಚ್ಚು । ಮನೆಯ ಸುಟ್ಟಲ್ಲದೆ ।
ನೆರೆಮನೆ ಬೇವುದೆ । ಕೂಡಲಸಂಗಮದೇವ ॥೨॥

(೨೦)

ರಾಗ:— ಕೇದಾರ ತಾಲ:— ಝಂಪತಾಲ.

(ಸ್ಮರಹರನು ಶಂಕರನ ಎಂಬಂತೆ.)

ಕಳ್ಳಗಂಜಿ ಕಾಡ ಹೊಕ್ಕರೆ । ಹುಲಿ ತಿಂಬುದ ಮಾಬುದೇ । ಹುಲಿಗಂಜಿ ಹುತ್ತವ ಹೊಕ್ಕರೆ । ಸರ್ಪ ತಿಂಬುದ ಮಾಬುದೇ ॥ಪಲ್ಲ॥

ಕಾಲಗಂಜಿ ಭಕ್ತನಾದರೆ । ಕರ್ಮ ತಿಂಬುದ ಮಾಬುದೇ । ಮೃತ್ಯುವಿನ ಬಾಯ ತುತ್ತಾದ । ವೇಷ ಡಂಭಕರನೇನೆಂಬೆ ಗುಹೇಶ್ವರಾ ॥೧॥

(೨೧)

ರಾಗ:— ಸೋಹನಿ ತಾಲ:— ತ್ರಿತಾಲ.

(ಸಾವರೋಚರಾವತ ಎಂಬಂತೆ)

ಮಡಿಕೆಯ ಮಾಡುವರೆ । ಮಣ್ಣೇ ಮೊದಲು । ತೊಡಿಗೆಯ ಮಾಡುವರೆ। ಹೊನ್ನೇ ಮೊದಲು । ಶಿವಪಥವ ನರಿವಡೆ । ಗುರುಪಥವೆ ಮೊದಲು ॥ಪಲ್ಲ॥

ಕೂಡಲ ಸಂಗಮ । ದೇವರನರಿವಡೆ । ಶರಣರ ಸಂಗವೇ ಮೊದಲು ॥೧॥



(೨೨)

ರಾಗ:— ಖಂಬಾವತಿ ತಾಲ:— ತ್ರಿತಾಲ.

(ಸುಖಸ್ವಾಮಿನೀ ಎಂಬಂತೆ.)

ಆರು ಮುನಿದು ನಮ್ಮ । ನೇನ ಮಾಡುವರು । ಊರು ಮುನಿದು ನಮ್ಮ । ನೆಂತ ಮಾಡುವರು ॥ಪಲ್ಲ॥

ನಮ್ಮ ಕುನ್ನಿಗೆ ಕೂಸ ಕೊಡಬೇಡ । ನಮ್ಮ ಸೊಣಗಂಗೆ । ತಳಿಗೆಯಲಿಕ್ಕಬೇಡ ॥೧॥

ಆನೆಯ ಮೇಲೆ ಹೋಹವನ। ಶ್ವಾನ ಕಚ್ಚಬಲ್ಲುದೆ। ಕೂಡಲಂಗಮ ದೇವರುಳ್ಳ। ನ್ನಕ್ಕರ ನಮಗೇನಯ್ಯ ॥೨॥

(೨೩)

ರಾಗ:— ಕಾಲಂಗಡ (ಕರ್ನಾಟಕೆ) ತಾಲ:— ದೀಪಚಂದಿ

ಅಮೃತಕ್ಕೆ ಹಸಿವುಂಟೆ । ಜಲಕೆ ತೃಷೆಯುಂಟೆ । ಘನ ಪುರುಷಂಗೆ । ವಿಷಯವುಂಟೆ ॥ಪಲ್ಲ॥

ಸದ್ಗುರು ಕಾರುಣ್ಯ । ವಿಡಿದು ಲಿಂಗಾರ್ಚನೆಯ ಮಾಡುವ ಮಹಾ ಶರಣಂಗೆ । ಮುಕ್ತಿಯ ಬಯಕೆಯುಂಟೆ ॥೧॥

ಅವರುಗಳಿಗೆ ಇದು ಸ್ವಯಂಭು। ಸಹಜ ಸ್ವಭಾವ ಇನ್ನು ತೃಪ್ತಿ । ಆಪ್ಯಾಯನ ಅರಸಲುಂಟೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ ॥೨॥

(೨೪)

ರಾಗ:— ಜೀವನಪುರಿ  ತಾಲ:— ತ್ರಿತಾಲ

(ಅಜಿಪುವಾಹಿ ಎಂಬಂತೆ)

ಮನವೆಂಬ ಮರ್ಕಟನು। ತನುವೆಂಬ ವೃಕ್ಷವನೇರಿ।
ಇಂದ್ರಿಯಗಳೆಂಬ ಶಾಖೆ । ಶಾಖೆಗೆ ಹಾರಿ  ॥ಪಲ್ಲ॥

ವಿಷಯಂಗಳೆಂಬ ಹಣ್ಣು । ಫಲಂಗಳ ಗ್ರಹಿಸಿ ।
ಘನದತ್ತ ಮುಖವಾಗಿ ಹೋಗುತ್ತಿದೆ ನೋಡಾ  ॥೧॥

ಮನವೆಂಬ ಮರ್ಕಟ ನಿಮ್ಮ । ನೆನವೆಂಬ ಪಾಶದಿ
ಕಟ್ಟಿ । ಎನ್ನನುಳಿಹಿಸಿಕೊಳ್ಳಯ್ಯಾ। ಅಖಂಡೇಶ್ವರಾ ॥೨॥

(೨೫)

ರಾಗ: — ಭೈರವಿ.  ತಾಲ:— ತ್ರಿತಾಲ.

(ನಿಸಿದಿನಿ ಮನಿ ಎಂಬ ತೆ)

ಭಕ್ತಿ ರೂಪನು ಬಸವ । ನಿತ್ಯ ರೂಪನು ಬಸವ ।
ಮತ್ತಾನಂದ ಸ್ವರೂಪನು ಬಸವಣ್ಣನು । ಸದ್ರೂಪನು
ಬಸವ । ಚಿದ್ರೂಪನು ಬಸವ ॥ಪಲ್ಲ॥

ಎತ್ತ ನೋಡಿದಡತ್ತ ಪರಿಪೂರ್ಣನಾಗಿಪ್ಪನು ।
ಬಸವಣ್ಣನಿಂದ ನಿತ್ಯ । ಸುಖಿಯಾದೆನಯ್ಯಾ । ಕಪಿಲಸಿದ್ಧ
ಮಲ್ಲಿಕಾರ್ಜುನಯ್ಯಾ  ॥೧॥



(೨೬)

ರಾಗ:— ಶಂಕರಾ.  ತಾಲ: ಝಪತಾಲ.

(ಸೀತಾಪತೇ ರಾಮ ರಾಧಾಪತೆ ಕೃಷ್ಣ ಎಂಬಂತೆ)

ಆಶೆಯುಳ್ಳನ್ನಕ್ಕ । ಬಬ್ಬರ ಆಶ್ರಯಿಸುವದು ।
ಆಶ್ರಯದಾಸೆ ಕಷ್ಟ ಕಾಣಿರಯ್ಯಾ  ॥ಪಲ್ಲ॥

ಆಶೆಯೇ ದಾಸತ್ವ। ನಿರಾಶೆಯೇ ಈಶತ್ವ। ದಾಸತ್ವ
ಈಶತ್ವ । ಈ ಅನುವ ವಿಚಾರಿಸಿ  ॥೧॥

ನಿರಾಶೆಯಾಗಿಪ್ಪುದೇ । ಈಶ ಪದವಯ್ಯಾ । ಉರಿ
ಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ  ॥೨॥

(೨೭)

ರಾಗ:— ನಂದ.  ತಾಲ:— ತ್ರಿತಾಲ

(ಹಾಸೋನಿ ನಾಚೋನಿ ಎಂಬಂತೆ.)

ಶಿವನೇ ದೈವ। ಕೊಲ್ಲದಿಪ್ಪುದೇ ಧರ್ಮ। ಅಧರ್ಮ
ದಿಂದ ಬಂದುದ । ನೊಲ್ಲದಿಪ್ಪುದೆ ನೇಮ  ॥ಪಲ್ಲ॥

ಆಶೆಯಿಲ್ಲದೆ ಇಪ್ಪುದೆ ತಪ। ರೋಷವಿಲ್ಲದೆ ಇಪ್ಪುದೆ
ಜಪ । ವಂಚನೆಯಿಲ್ಲದೆ ಇಪ್ಪುದೆ ಭಕ್ತಿ  ॥೧॥

ಹೆಚ್ಚು ಕುಂದಿಲ್ಲದೆ ಇಪ್ಪುದೆ ಸಮಯಾಚಾರ ।
ಇದುವೆ ಸತ್ಯ ಶಿವ ಬಲ್ಲ ಶಿವನಾಣೆ । ಉರಿಲಿಂಗ ಪೆದ್ದಿ ।
ಪ್ರಿಯ ವಿಶ್ವೇಶ್ವರಾ  ॥೨॥

(೨೮)

ರಾಗಃ— ಬಾಗೇಶ್ರೀ (ಕರ್ನಾಟಕೀ)   ತಾಲ: – ಝಪತಾಲ.

ಕಾಗೆ ಒಂದಗಳು ಕಂಡರೆ । ಕರೆಯದೆ ತನ್ನ ಬಳಗವನೆಲ್ಲವನು । ಕೋಳಿ ಒಂದು ಗುಟುಕ ಕಂಡರೆ । ಕರೆಯದೆ ತನ್ನ ಕುಲವನೆಲ್ಲವನು ॥ಪಲ್ಲ॥

ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ। ಕಾಗೆ ಕೋಳಿಗಿಂತ ಕರಕಷ್ಟ ಕೂಡಲಸಂಗಮದೇವಾ ॥೧॥

(೨೯)

ರಾಗ:— ದೇಸಕರ   ತಾಲ:— ತ್ರಿತಾಲ

(ಪುರುಷಾಸ ಸ್ತ್ರೀ ಎಂಬಂತೆ.)

ಸೆಟ್ಟಿಯೆಂಬೆನೆ ಸಿರಿಯಾಳನ, ಮಡಿವಳನೆಂಬೆನೆ ಮಾಚಯ್ಯನ। ಡೋಹರನೆಂಬೆನೆ ಕಕ್ಕಯ್ಯನ ॥ಪಲ್ಲ॥

ಮಾದರನೆಂಬೆನೆ ಚನ್ನಯ್ಯನ। ಆನು ಹಾರುವನೆಂದಡೆ ಕೂಡಲ। ಸಂಗಯ್ಯ ನಗುವನಯ್ಯ ॥೧॥

(೩೦)

ರಾಗ: — ತಿಲಕ ಕಾಮೋದ ತಾಲ: — ಏಕತಾಲ

(ನುರಲೇ ಮಾನಸ ಎಂಬಂತೆ )

ನುಡಿಯಲ್ಲಿ । ಕರ್ಕಶವಿಲ್ಲದೆ । ನಡೆಯಲ್ಲಿ ಬೇಸರ ವೋಗದೆ । ಹಿಡಿದ ಭಕ್ತಿಯ ಕಡೆತನಕ ಬಿಡದೆ ॥ಪಲ್ಲ॥



ಬಡತನ ಎಡರು ಕಂಟಕಗಳು ಬಂದಲ್ಲಿ । ಚಿಂತೆಯಿಂದ ಕಾಂತಿಗುಂದದೆ । ಅಡಿಗಡಿಗೆ ಶಿವಶಿವಾ ॥೧॥

ಎಂಬ ನುಡಿಯು ಮರೆಯದಿಪ್ಪ । ಸದ್ಭಕ್ತರಿಗೆ ಬೇಡಿದ ಪದವಿಯ ನೀವ । ನಮ್ಮ ಅಖಂಡೇಶ್ವರಾ ॥೨॥

(೩೧)

ರಾಗಃ- ಕಾಫಿ.   ತಾಲಃ- ತ್ರಿತಾಲ.

(ಬಾಳಾಕಾ ಝೋಪ ಯೇಯಿನಾ....ಎಂಬಂತೆ)

ಎಲ್ಲಿ ನೋಡಿದಡಲ್ಲಿ ನೀನೆ ದೇವಾ। ಎಲ್ಲಿ ಮುಟ್ಟಿದಲ್ಲಿ ನೀನೆ ದೇವಾ ॥ಪಲ್ಲ॥

ಎಲ್ಲಿ ಭಾವಿಸಿದಲ್ಲಿ ನೀನೆ ದೇವಾ । ಎಲ್ಲೆಡೆಯಲ್ಲಿ ನಿಮ್ಮ । ಮಹಾ ಪ್ರಭೆಯು ಮುಸುಕಿತಾಗಿ, ಅಖಂಡೇಶನಾ ನೀನೆಂಬುದಕ್ಕೆ ತೆರಹಿಲ್ಲ ॥೧॥

(೩೨)

ರಾಗಃ— ಮಿಶ್ರ ಪಹಾಡಿ.   ತಾಲಃ— ಕವಾಲಿ.

(ವಂದಿತ ರಾಧಾ ಬಾಲಾ....ಎಂಬಂತೆ.)

ಎನ್ನ ಕಾಯದ ಕಠಿಣವ ಕಳೆಯಯ್ಯ। ಎನ್ನ ಜೀವದುಪಾಧಿಯ ಕಳೆಯಯ್ಯ ॥ ಎನ್ನ ಪ್ರಾಣದ ಪ್ರಪಂಚವ ತೊಲಗಿಸಯ್ಯ । ಎನ್ನ ಭಾವದ ಭ್ರಮೆಯ ಕೆಡಿಸಯ್ಯ ।

ಎನ್ನ ಮನದ ವ್ಯಾಕುಳವ ಮಾಣಿಸಯ್ಯಾ। ಎನ್ನ ಕರಣೇಂದ್ರಿಯಗಳ । ಕಷ್ಟ ಗುಣವ ನಷ್ಟ ಮಾಡಯ್ಯ । ಎನ್ನ ಜೀವದುಪಾಧಿಯ ಕಳೆಯಯ್ಯ । ಎನ್ನೊಳಗೆ ನಿಮ್ಮ ಕರುಣಾಮೃತವ ತುಂಬಯ್ಯಾ । ಗುರುವೆ ಅಖಂಡೇಶ್ವರಾ ॥೧॥

(೩೩)

ರಾಗ:—ಖಂಬಾವತಿ. ತಾಲ:— ತ್ರಿತಾಲ.

(ಸಖಿ ಮೋಹನ ಮುರಲಿ ಸುನಾವೆ ಎಂಬಂತೆ.)

ಬೇವಿನ ಬೀಜವ ಬಿತ್ತಿ ।
ಬೆಲ್ಲದ ಕಟ್ಟೆಯ ಕಟ್ಟೆ ॥ಪಲ್ಲ॥
ಆಳಳ ಹಾಲನೆರೆದು । ಜೇನ ತುಪ್ಪ ಹೊಯ್ದರೆ. ।
ಸಿಹಿಯಾಗಬಲ್ಲುದೆ । ಕಹಿಯಹುದಲ್ಲದೆ ॥೧॥
ಶಿವಭಕ್ತರಲ್ಲದವರ । ಕೂಡೆ ನುಡಿಯಲಾಗದು ।
ಕೂಡಲಸಂಗಮದೇವಾ ॥೨॥

(೩೪)

ರಾಗ:— ಭೈರವ (ಕರ್ನಾಟಕೀ) ತಾಲ:— ದೀಪಚಂದಿ

ಅಕಟಕಟಾ ಶಿವ । ನಿನಗಿನಿತು ಕರುಣವಿಲ್ಲ । ಅಕ
ಟಕಟಾ ಶಿವ । ನಿನಗಿನಿತು ಕೃಪೆಯಿಲ್ಲ ॥ಪಲ್ಲ॥
ಯಾಕೆ ಹುಟ್ಟಿಸಿದೆ। ಇಹಲೋಕ ದುಃಖಿಯ। ಯಾಕೆ
ಹುಟ್ಟಿಸಿದೆ । ಪರಲೋಕ ದೂರನ ॥೧॥



ಯಾಕೆ ಹುಟ್ಟಿಸಿದೆ ಕೂಡಲ।
ಸಂಗಮದೇವ ಕೇಳಯ್ಯಾ ।
ಎನಗೆ ಮತ್ತೊಂದು । ತರುಮರಾದಿಗಳಿದ್ದಿಲ್ಲವೇ ॥೨॥

(೩೫)

ರಾಗ: — ದುರ್ಗಾ. ತಾಲಃ— ತ್ರಿತಾಲ.

(ಮನ ಮೋಹನ ಮುರಲೀವಾಲಾ ಎಂಬಂತೆ.)

ಬೇಕೆನಲಾಗದು ಶರಣಂಗೆ ।
ಬೇಡೆನಲಾಗದು ಶರಣಂಗೆ ॥ಪಲ್ಲ॥
ಬಂದ ಸುಖವನತಿಗಳೆಯ । ಲಾಗದು ಶರಣಂಗೆ ।
ಇದು ಕಾರಣ ಕೂಡಲ ಚನ್ನಸಂಗಯ್ಯ ।
ನಿಮ್ಮ ಶರಣರು ಉಂಡು । ಉಪವಾಸಿಗಳು ।
ಬಳಸಿ ಬ್ರಹ್ಮಚಾರಿಗಳು ॥೧॥

(೩೬)

ರಾಗಃ— ಭೀಮಪಲಾಸ. ತಾಲಃ—ತ್ರಿತಾಲ.

(ಭೂಷಣ ಸಂಸಾರ.... ಎಂಬಂತೆ.)

ತುಂಬಿದುದು ತುಳುಕದು ನೋಡಾ ।
ನಂಬಿದುದು ಸಂದೇಹಿಸದು ನೋಡಾ ॥ಪಲ್ಲ॥
ಒಲಿದುದು ಓಸರಿಸದು ನೋಡಾ ।
ನೆರೆಯರಿದುದು ಮರೆಯದು ನೋಡಾ ॥೧॥

ಚೆನ್ನಮಲ್ಲಿಕಾರ್ಜುನಯ್ಯ । ನೀನೊಲಿದ ।
ಶರಣಂಗೆ । ನಿಸ್ಸೀಮ ಸುಖವಯ್ಯಾ ॥೨॥

(೩೭)

ರಾಗ:— ಮಾಲಕಂಸ. ತಾಲ:— ತ್ರಿತಾಲ.

(ಮುಖ ಮೋರ ಮೋರ ಮೂಸೆ ಎಂಬಂತೆ)

ಮಾರಿ ಮಸಣಿ ಎಂಬವು ಬೇರಿಲ್ಲ ಕಾಣಿರೊ ।
ಮಾರಿಯೆಂಬುದೇನು । ಕಂಗಳು ತಪ್ಪಿ ನೋಡಿದರೆ
ಮಾರಿ ॥ಪಲ್ಲ॥
ನಾಲಿಗೆ ತಪ್ಪಿ ನುಡಿದರೆ ಮಾರಿ ।
ನಮ್ಮ ಕೂಡಲ ಸಂಗಯ್ಯನ ।
ನೆನಹ ಮರೆದರೆ ಮಾರಿ ॥೧॥

(೩೮)

ರಾಗ:— ಯಮುನ. ತಾಲ:— ಝಪತಾಲ

(ನಯನೇ ಲಾಜವಿಶ....ಎಂಬಂತೆ)

ಹುತ್ತವ ಬಡಿದರೆ। ಹಾವು ಸಾಯಬಲ್ಲುದೇನಯ್ಯ।
ಅಘೋರ ತಪವ । ಮಾಡಿದಡೇನು ॥ಪಲ್ಲ॥
ಅಂತರಂಗ ಆತ್ಮಶುದ್ಧ। ವಿಲ್ಲದವರನೆಂತು ।
ನಂಬುವೆನಯ್ಯ । ಕೂಡಲಸಂಗಮದೇವಾ ॥೧॥



(೩೯)

ರಾಗ:— ಮಾಂಡ. ತಾಲ:— ದಾದರಾ.

(ಛಾನ ಹರಿಹಾ ಮೋಹಿ ನಯನಾ ಎಂಬಂತೆ)

ಘಟವನೊಡೆದು। ಬಯಲ ನೋಡಲದೇಕೆ ॥ಪಲ್ಲ॥
ಘಟದೊಳಗಿಪ್ಪುದೇ । ಬಯಲೆಂದರಿದಡೆ ಸಾಲದೇ।
ಪಟವ ಹರಿದು । ತಂತುವ ನೋಡಲದೇಕೆ ॥೧॥
ಬಯಲ ನೋಡಲದೇಕೆ ॥
ಆ ಪಟವ ತಂತು । ವೆಂದರಿದಡೆ ಸಾಲದೇ ।
ಕಟಕವ ಮುರಿದು।ಕಾಂಚನವ ನೋಡಲದೇಕೆ॥೨॥
ಬಯಲ ನೋಡಲದೇಕೆ ॥
ಆ ಕಟಕವೇ ಕಾಂಚನ । ವೆಂದರಿದಡೆ ಸಾಲದೇ ।
ತನ್ನನಳಿದು ಘನವ । ನೋಡಲದೇಕೆ ॥೩॥
ಬಯಲ ನೋಡಲದೇಕೆ॥
ತಾನೆ ಘನವೆಂ । ದರಿದಡೆ ಸಾಲದೇ । ಹೇಳಾ
ರಾಮನಾಥಾ ॥೪॥
ಬಯಲ ನೋಡಲದೇಕೆ ॥

(೪೦)

ರಾಗ:— ಸೋಹನಿ. ತಾಲ:— ತ್ರಿತಾಲ

(ಲೋಳತ ಕಚಮುಖ ಮಧುವರಿ ಎಂಬಂತೆ)

ದೇವಲೋಕ ಮರ್ತ್ಯಲೋಕ ।
ವೆಂಬವು ಬೇರಿಲ್ಲ ಕಾಣಿರೋ ।

ಸತ್ಯವ ನುಡಿವುದೇ ದೇವಲೋಕ ।
ಅಸತ್ಯವ ನುಡಿವುದೇ ಮರ್ತ್ಯಲೋಕ ॥ಪಲ್ಲ॥
ಆಚಾರವೇ ಸ್ವರ್ಗ । ಅನಾಚಾರವೇ ನರಕ ।
ಇದಕ್ಕೆ ನೀವೇ ಪ್ರಮಾಣು। ಕೂಡಲಸಂಗಮದೇವಾ॥೧॥

(೪೧)
ರಾಗಃ— ಬಿಹಾಗ. ತಾಲಃ— ತ್ರಿತಾಲ.
(ಬಾಲಮರೇ.... ಎಂಬಂತೆ)

ಕಳಬೇಡ ಕೊಲಬೇಡ ।
ಹುಸಿಯ ನುಡಿಯಲುಬೇಡ। ಮುನಿಯಬೇಡ।
ಅನ್ಯರಿಗೆ ಅಸಹ್ಯಬಡಬೇಡ ॥ಪಲ್ಲ॥
ತನ್ನ ಬಣ್ಣಿಸಬೇಡ । ಇದಿರ ಹಳಿಯಲುಬೇಡ ।
ಇದೇ ಅಂತರಂಗ ಶುದ್ಧಿ ॥೧॥
ಇದೇ ಬಹಿರಂಗ ಶುದ್ಧಿ । ಇದೇ ನಮ್ಮ ।
ಕೂಡಲ ಸಂಗನನೊಲಿಸುವ ಪರಿ ॥೨॥

(೪೨)
ರಾಗಃ— ಕಾಫಿ. ತಾಲಃ— ತ್ರಿತಾಲ.
(ಭಕ್ತಿಭಾವ ಹಾ ಧ್ಯಾ ಎಂಬಂತೆ.)

ಪರಧನ ಒಲ್ಲದಿಪ್ಪುದೇ ವ್ರತ ।
ಪರಸ್ತ್ರೀಯರ ಕೂಡದಿಪ್ಪುದೇ ಶೀಲ ।
ಸರ್ವ ಜೀವವ ಕೊಲ್ಲದಿಪ್ಪುದೇ ನೇಮ॥ಪಲ್ಲ॥



ತಥ್ಯ ಮಿಥ್ಯವನಳಿದು
ಇಪ್ಪುದೇ ನಿತ್ಯ ನೇಮ ॥೧॥
ಇದು ಈಶಾನ್ಯಮೂರ್ತಿ ಮಲ್ಲಿಕಾರ್ಜುನ ।
ಲಿಂಗಕ್ಕೆ ಸಂದೇಹವಿಲ್ಲದ ವ್ರತ ॥೨॥

(೪೩)
ರಾಗಃ— ಭೈರವಿ. ತಾಲಃ—ತ್ರಿತಾಲ.
(ನಚ ಮಾನಸಾ....ಎಂಬಂತೆ.)

ಕಾಯ ಕರ್ರನೆ । ಕಂದಿದರೇನಯ್ಯ ।
ಕಾಯ ಮಿರ್ರನೆ । ಮಿಂಚಿದರೇನಯ್ಯ ॥ಪಲ್ಲ॥
ಅಂತರಂಗ । ಶುದ್ಧವಾದ ಬಳಿಕ ।
ಚನ್ನಮಲ್ಲಿಕಾರ್ಜುನ ।
ಲಿಂಗವು ಒಲಿದ ಕಾಯವು। ಹೇಗಿದ್ದರೇನಯ್ಯ॥೧॥

(೪೪)
ರಾಗಃ—ಭೀಮಪಲಾಸ. ತಾಲಃ—ಏಕತಾಲ.
(ಮೋಹನ ಶ್ಯಾಮ ಶೋಭನಾ ಎಂಬಂತೆ.)

ಆಡಿದರೇನು ಹಾಡಿದರೇನು ।
ಓದಿದರೇನು ತ್ರಿವಿಧ ದಾಸೋಹವಿಲ್ಲದನ್ನಕ್ಕ॥ಪ॥
ಆಡದೇ ನವಿಲು ಹಾಡದೇ ತಂತಿ ।
ಓದದೇ ಗಿಣಿ ।
ಭಕ್ತಿಯಿಲ್ಲದವರನೊಲ್ಲ ।
ಕೂಡಲಸಂಗಮದೇವ ॥೧॥

(೪೫)

ರಾಗಃ— ಮುಲ್ತಾನಿ. ತಾಲಃ ತ್ರಿತಾಲ.

(ಹಮಸೇ ತುಮರಾರ ಕರೋಂಗಿರೆ ಎಂಬಂತೆ)

ಎನ್ನ ಮಾಯದ ಮದವ ಮುರಿಯಯ್ಯ ।
ಎನ್ನ ಕಾಯದ ಕಳವಳವ ಕೆಡಿಸಯ್ಯ ।
ಎನ್ನ ಜೀವದ ಜಂಜಡವ ಬಿಡಿಸಯ್ಯ ॥ಪಲ್ಲ॥

ಎನ್ನ ದೇವ । ಚನ್ನಮಲ್ಲಿಕಾರ್ಜುನಯ್ಯ ।
ಎನ್ನ ಸುತ್ತಿದ ಮಾಯಾ ಪ್ರಪಂಚವ ।
ಬಿಡಿಸಾ ನಿಮ್ಮ ಧರ್ಮ ॥೧॥

(೪೬)

ರಾಗಃ— ಮಿಶ್ರ ಪಹಾಡಿ. ತಾಲಃ— ಕವಾಲಿ.

(ಹಾಸತ ನಾಚತ ಜಾವು....ಎಂಬಂತೆ.)

ತನು ಬತ್ತಲೆ ಇದ್ದರೇನಯ್ಯ ।
ಮನ ಶುಚಿಯಾಗದನ್ನಕ್ಕರ ॥ಪಲ್ಲ॥

ಮುಂಡೆ ಬೋಳಾದಡೇನು ।
ಭಾವ ಬಯಲಾಗದನ್ನಕ್ಕರ ।
ಭಸ್ಮವ ಹೂಸಿದಡೇನು ಕರಣಾದಿ
ಗುಣಂಗಳನೊತ್ತಿ ।
ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ



ಇಂತು ಆಶೆಯ ವೇಷದ ಭಾಷೆಗೆ ।
ಗುಹೇಶ್ವರ ಸಾಕ್ಷಿಯಾಗಿ ಛೀ ಎಂಬೆನು ।
ಕಾಣಾ ಸಂಗನಬಸವಣ್ಣ ॥೧॥

(೪೭)

ರಾಗಃ— ಕೇದಾರ ತಾಲಃ— ತ್ರಿತಾಲ.

(ಮಾರಹರಾ ತಾ....ಎಂಬಂತೆ.)

ನಿಷ್ಠೆಯುಳ್ಳಾತಂಗೆ । ನಿತ್ಯ ನೇಮದ ಹಂಗೇಕೆ
ಸತ್ಯವುಳ್ಳಾತಂಗೆ। ತತ್ವ ವಿಚಾರದ ಹಂಗೇಕೆ॥ಪಲ್ಲ॥

ಮನ ಶುದ್ಧವುಳ್ಳಾತಂಗೆ । ಮಂತ್ರದ ಹಂಗೇಕೆ ।
ಅರಿವುಳ್ಳಾತಂಗೆ । ಅಗ್ಗವಣಿಯ ಹಂಗೇಕೆ ॥೧॥

ಭಾವ ಶುದ್ಧವುಳ್ಳಾತಂಗೆ । ಹೂವಿನ ಹಂಗೇಕೆ ।
ಕೂಡಲಚನ್ನಸಂಗಯ್ಯ ನಿಮ್ಮನರಿದಾತಂಗೆ ನಿಮ್ಮ
ಹಂಗೇಕೆ ॥೨॥

(೪೮)

ರಾಗಃ— ಸೋಹನಿ. ತಾಲಃ— ತ್ರಿತಾಲ.

(ಸಾವರೀಚಗಾವತ ಎಂಬಂತೆ )

ಮುಗಿಲ ಮರೆಯ ಸೂರ್ಯನಂತೆ ।
ನೆಲದ ಮರೆಯ ನಿಧಾನದಂತೆ ।
ಒರೆಯ ಮರೆಯ ಅಲಗಿನಂತೆ ॥ಪಲ್ಲ॥

ಹಣ್ಣಿನೊಳಗಣ ರಸದಂತೆ ।
ಶರಣ ಶರೀರವ ಮರೆಗೊಂಡು ॥೧॥
ಪರಮ ಪಾವನ ಮೂರ್ತಿ ಪರಾಪರ ತಾನು ।
ತಾನಾಗಿರ್ದುದನೇನೆಂಬೆನಯ್ಯ ॥೨॥
ಮಹಾಲಿಂಗ ಗುರು ಶಿವ ।
ಸಿದ್ಧೇಶ್ವರಪ್ರಭುವೇ ॥೩॥

(೪೯)

ರಾಗ:— ಬಿಹಾಗ     ತಾಲ:— ತ್ರಿತಾಲ

ಹುತ್ತದ ಮೇಲಣ । ರಜ್ಜು ಮುಟ್ಟಿದರೆ ।
ಸಾವರು ಶಂಕಿತ । ರಾದವರು ॥ಪಲ್ಲ॥
ಸರ್ಪ ದಷ್ಟವಾದರೆಯೂ ।
ಸಾಯರು ನಿಶ್ಯಂಕಿತರಾದವರು ॥೧॥
ಕೂಡಲಸಂಗಮದೇವ ಶಂಕಿತಂಗೆ ।
ಪ್ರಸಾದ ಸಿಂಗಿ ಕಾಳಕೂಟ ವಿಷವು ॥೨॥

(೫೦)

ರಾಗ:— ಮಿಶ್ರ ಪಹಾಡಿ.     ತಾಲ:— ಕವಾಲಿ.

ಹರನೀವ । ಕಾಲಕ್ಕೆ ಸಿರಿಯು ಬೆನ್ನಲಿ । ಬಕ್ಕು ।
ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯ ।
ನೆರೆಯದ ವಸ್ತು ನೆರೆವುದು ನೋಡಯ್ಯ ॥ಪಲ್ಲ॥



ಅರಸು ಪರಿವಾರ ಕೈವಾರ ನೋಡಯ್ಯ ।
ಪರಮ ನಿರಂಜನನು ಮರೆವ ಕಾಲಕ್ಕೆ ।
ತುಂಬಿದ ಹರವಿಯು । ಕಲ್ಲು ಕೊಂಡಂತೆ ।
ಕೂಡಲ । ಸಂಗಮದೇವಾ ॥೧॥

(೫೧)

ರಾಗಃ- ಭೈರವಿ     ತಾಲಃ- ದಾದರಾ

(ರಜ್ಯಾ ಪ್ರಭು ತೂನೆ........ಎಂಬಂತೆ)

ಚಕೋರಂಗೆ ಚಂದ್ರಮನ । ಬೆಳಗಿನ ಚಿಂತೆ ।
ಅಂಬುಜಕ್ಕೆ ಭಾನುವಿನ ಉದಯದ ಚಿಂತೆ ॥ಪಲ್ಲ॥
ಭ್ರಮರಂಗೆ ಪರಿಮಳದ । ಬಂಡುಂಬ ಚಿಂತೆ ।
ಎನಗೆ ನಮ್ಮ ಕೂಡಲ ಸಂಗಮ । ದೇವರ ನೆನೆವ
ಚಿಂತೆ ॥೧॥

(೫೨)

ರಾಗಃ-ಪಹಾಡಿ     ತಾಲ:-ಕವಾಲಿ

(ಲೋಟು ನಕೊ ನುಜದೂರ ಕನ್ಹಯ್ಯಾ ಎಂಬಂತೆ)

ಎನ್ನೊಳಗೆ ನೋಡಿದರೆ । ಎಳ್ಳನಿತು ಹುರುಡಿಲ್ಲವಯ್ಯ
ದೇವಾ ।
ಹೊನ್ನು ಹೆಣ್ಣು ಮಣ್ಣು ನನ್ನದು ॥ಪಲ್ಲ॥
ಪುತ್ರ ಮಿತ್ರ ಕಳತ್ರಾದಿಗಳು ನನ್ನದು
ಧನಧಾನ್ಯ ಆನೆ ಕುದುರೆ ಎತ್ತು ತೊತ್ತು

ಮಂದಿ ಮಕ್ಕಳು ಅಷ್ಟೈಶ್ವರ್ಯದಲ್ಲಿ ।
ನಾ ಬಲ್ಲಿದೆನೆಂದು ಬಲು ಹಮ್ಮಿನಿಂದ ॥೧॥

ಗುರುಹಿರಿಯರ ಕಂಡರೆ ತಲೆವಾಗದಯ್ಯ ಎನ್ನ ಚಿತ್ತವು।
ಇಂಥ ಚಿತ್ತದಿಂದೆ ನುಗ್ಗು ನುರಿಯಾದೆನಯ್ಯ ।
ನಿಃಕಳಂಕ ಮೂರ್ತಿ ಸಚ್ಚಿದಾನಂದ ಎನ್ನಪರಾಧವ ।
ನೋಡದೆ ಕಾಯಯ್ಯ ಶ್ರೀ ಗುರುಲಿಂಗ ಜಂಗಮುವೇ ।। ೨ ।

(೫೩)

ರಾಗಃ- ತಿಲಕ ಕಾಮೋದ ತಾಲಃ- ಏಕತಾಲ

(ನುರಲೇ ಮಾನಸ....ಎಂಬಂತೆ)

ಹಗಲು ಹಸಿವೆಗೆ ಕುದಿದು
ಇರುಳು ನಿದ್ರೆಗೆ ಕುದಿದು ।
ಉಳಿದಾದ ಹೊತ್ತೆಲ್ಲ ॥ಪಲ್ಲ॥

ಅಶನ ವ್ಯಸನಕ್ಕೆ ಕುದಿದು ।
ಅಯ್ಯ ನಿಮ್ಮನರಿಯದ ಪಾಪಿ ನಾನಯ್ಯ ।
ಅಯ್ಯ ನಿಮ್ಮನರಿಯದ ಕರ್ಮಿ ನಾನಯ್ಯ ॥೧॥

ಮಹಾಲಂಗ ಕಲ್ಲೇಶ್ವರಾ ।
ಆಸಗ ನೀರಡಿಸಿ ಸತ್ತ ತೆರ ।
ನಂತಾಯಿತ್ತೆನ್ನ ಯುಕ್ತಿ ॥೨॥



(೫೪)

ರಾಗಃ- ಅಸಾವೇರಿ. ತಾಲಃ- ಆದಿತಾಲ

(ಮನುಜ ಶರೀರವಿದೇನು ಸುಖಾ ...)

ನೀರ ಕಂಡಲ್ಲಿ । ಮುಳುಗುವರಯ್ಯ ॥ಪ॥

ಮರನ ಕಂಡಲ್ಲಿ । ಸುತ್ತುವರಯ್ಯ ।
ಬತ್ತುವ ಜಲವ । ಒಣಗುವ ಮರನ ।
ನೆಚ್ಚಿದವರು । ನಿಮ್ಮನೆತ್ತ ಬಲ್ಲರು ।
ಕೂಡಲ ಸಂಗಮ । ದೇವಾ ॥೧॥

(೫೫)

ರಾಗಃ- ಕಾಫಿ ತಾಲಃ ತ್ರಿತಾಲ

(ವಸಂತ ಆಲಾ. ..ಎಂಬಂತೆ)

ಉಟ್ಟುದ ತೊರೆದವಗೆ । ಊರೇನು ಕಾಡೇನು ।
ನಷ್ಟ ಸಂತಾನಕ್ಕೆ । ಕುಲವೇನು ಫಲವೇನು ॥ಪಲ್ಲ॥

ಹುಟ್ಟುಗೆಟ್ಟಾತಂಗೆ । ಪುಣ್ಯವೇನು ಪಾಪವೇನು ।
ಅದು ಕೆಟ್ಟುದು । ಕೆಟ್ಟುದು ॥೧॥

ತನ್ನ ತಾನರಿಯದೆ । ಬಟ್ಟ ಬಯಲಲ್ಲಿ
ಬಿದ್ದ ನಮ್ಮ । ಅಜಗಣ್ಣ ತಂದೆ ॥೨॥

(೫೬)

ರಾಗಃ- ಮಿಶ್ರ ಪಹಾಡಿ ತಾಲ:- ಕವಾಲಿ

(ಯಮುನಾಜಳಿ ಖೇಳೂ ಖೇಳ ಎಂಬಂತೆ)

ಅತ್ತಲಿತ್ತ ಸಾರದಂತೆ ಹೆಳವನ ಮಾಡಯ್ಯ ತಂದೆಯೇ ।
ಸುತ್ತಿ ಸುಳಿದು ನೋಡಡಂತೆ ಅಂಧಕನ ಮಾಡಯ್ಯ ತಂದೆ।
ಮತ್ತೊಂದ ಕೇಳದಂತೆ । ಕಿವುಡನ ಮಾಡಯ್ಯ ತಂದೆ।
ಅನ್ಯ । ವಿಷಯಕ್ಕೆಳಿಸದಂತೆ ಇರಿಸು ಕೂಡಲ । ಸಂಗಮ
ದೇವಾ ॥೧॥

(೫೭)

ರಾಗಃ- ಕಾಫಿ ತಾಲಃ-ಏಕ ತಾಲ

(ಬರಕತು ಪಾಪಿಯಾ ಸಾರೆ .. ಎಂಬಂತೆ)

ಗಿಳಿಯೋದಿ ಫಲವೇನು ।
ಬೆಕ್ಕು ಬಹುದ ಹೇಳಲರಿಯದು ॥ಪಲ್ಲ॥
ಜಗವೆಲ್ಲ ಕಾಂಬ ಕಣ್ಣು ತನ್ನ ।
ಕೊಂಬ ಕೊಯಿಲೆಯ ಕಾಣಲರಿಯದು ।
ಇದಿರ ಗುಣವ ಬಲ್ಲೆವೆಂಬರು ।
ತಮ್ಮ ಗುಣವರಿಯರು ಕೂಡಲ ಸಂಗಮ ದೇವಾ ॥೧॥

(೫೮)

ರಾಗಃ- ತಿಲಕಕಾಮೋದ ತಾಲಃ- ದಾದರಾ

(ಪ್ರಣತನಾಥ ರಕ್ಷಿಕಾಂತ ಎಂಬಂತೆ.)

ತವನಿಧಿ ಬೆಳೆದವಗೆ । ಕಣಜದ ಹಂಗುಂಟೆ ।
ವಿರಕ್ತಂಗೆ ಆರೈಕೆಗೊಂಬುವರುಂಟೆ ॥ಪಲ್ಲ॥



ಕಾಯಕವ ಮಾಡುವ ಭಕ್ತಂಗೆ ।
ಇನ್ನಾರ ಕಾಡಲೇತಕ್ಕೊ ।
ಆ ಗುಣ ಅಮಳೇಶ್ವರ ಲಿಂಗಕ್ಕೆ ದೂರ ॥೧॥

(೫೯)

ರಾಗಃ ಪಟದೀಪ ತಾಲ:- ತ್ರಿತಾಲ

(ಜರಿಲೇ ಸುಶೀಲ ಸುಗುಣಾ....ಎಂಬಂತೆ)

ಅಪ್ಪನು ನಮ್ಮ ಮಾದಾರ ಚನ್ನಯ್ಯ ।
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ।
ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ ॥ಪ॥
ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ ।
ಎನ್ನನೇತಕ್ಕರಿಯಿರಿ। ಕೂಡಲ ಸಂಗಮದೇವಾ॥೧॥

(೬೦)

ರಾಗ:- ಜಿಲ್ಹಾ ಖಮಾಜ ತಾಲಃ-ಕವಾಲಿ

(ಸತ್ಯವದೆ ವಚನಾಲಾ...ಎಂಬಂತೆ)

ಮಣಿಯನೆಣಿಸಿ ದಿನವ ಕಳೆಯಲು ಬೇಡ ।
ಕಣಿಯ ಪೂಜಿಸಿ ದಿನವ ಕಳೆಯಲು ಬೇಡ ॥ಪ॥

ಕ್ಷಣವಾದರು ನಿಜದ ನೆನಹೆ ಸಾಕು ।
ಕ್ಷಣದೊಳಗಣ ಅರ್ಧವಾದರು ನಿಜದ ನೆನಹೆ ಸಾಕು।
ಬೆಂಕಿಯೊಳಗುಳ್ಳ ಬಿಸಿನೀರೊಳಗುಂಟೆ ಗುಹೇಶ್ವರಾ
॥೧॥

(೩೧)

ರಾಗ:- ಮಿಶ್ರ ಪಹಾಡಿ     ತಾಲ:- ಕವ್ವಾಲಿ

(ಆದಿ ಬಿಜ ಐಕಲೆ... ಎಂಬಂತೆ)

ಆಡಿ ಕಾಲು ದಣಿಯವು ।
ನೋಡಿ ಕಣ್ಣು ದಣಿಯವು, ಮಾಡಿ ಕೈ ದಣಿಯವು ॥
ಹಾಡಿ ನಾಲಿಗೆ ದಣಿಯದು, ಇನ್ನೇವೆ ॥ ಕಾಲು
ದಣಿಯವು ॥
ನಾ, ನಿಮ್ಮ ಕೈಯಾರೆ ಪೂಜಿಸಿ ।
ಮನ ದಣಿಯಲೊಲ್ಲದು, ಇನ್ನೇವೆ, ಇನ್ನೇವೆ॥ ಕಾಲು
ದಣಿಯವು ॥
ಕೂಡಲ ಸಂಗಮದೇವ ಕೇಳಯ್ಯ ।
ನಿಮ್ಮುದರವ ಬಗೆದಾನು ಹೊಗುವ ಭರವೆನಗೆ ॥
ಕಾಲು ದಣಿಯವು ॥

(೩೨)

ರಾಗಃ- ಮಿಶ್ರ ಪಹಾಡಿ     ತಾಲಃ- ಕವ್ವಾಲಿ

(ಧೀರೆ ಗಾಡಿ ಹಾಕರೆ.. ಎಂಬಂತೆ)

ತನ್ನ ತಾನರಿದೊಡೆ । ತಾನೇ ಚಿನ್ಮಯನಾದ, ಅಯ್ಯಾ
ಪರಬ್ರಹ್ಮ ನೋಡಾ । ತಾನೇ ಚಿನ್ನಾದ ।
ಚಿದ್ಬಿಂದು ಚಿತ್ಕಳಾ ಮೂರ್ತಿ ನೋಡು ।
ತಾನೇ ಸಕಲ । ಚೈತನ್ಯ । ಚಿತ್ಸೂತ್ರಧಾರೀ । ಅಯ್ಯಾ ।



ತನ್ನಿಂದಧಿಕ ಪರದೈವವಿಲ್ಲ, ನೋಡಾ. ತಾನೆ
ಸಚ್ಚಿದಾನಂದ ।
ಸ್ವರೂಪವಾದ ಚಿದ್ಘನ ಲಿಂಗ ನೋಡಾ ।
ಅಪ್ರಮಾಣ ಕೂಡಲ ಸಂಗಮದೇವಾ ॥೧॥

(೩೩)

ರಾಗಃ- ಮಿಶ್ರ ಪಹಾಡಿ     ತಾಲ:- ಧುಮಾಳಿ

(ಜಮುನಾಮೆ ಕೈಸೆ ಜಾವು ಎಂಬಂತೆ)

ಪರರಾಶೆ ಎಂಬ ಜ್ವರವು ಹತ್ತಿ ॥
ನಾನು ಕಳವಳಿಸಿ ನುಡಿವೆನಯ್ಯಾ ।
ಹೊನ್ನು ಹೆಣ್ಣು ಮಣ್ಣು ಬಯಸಿ ॥೧॥
ವಿಕಳತೆಗೊಂಡಂತೆ ಪ್ರಳಪಿಸುತ್ತ ।
ನುಡಿವೆನಯ್ಯ ಈ ಕಳವಳವ ನಿಲಿಸ ॥೨॥
ಕರುಣಾಮೃತವೆಂಬ ಕಷಾಯವನೆರೆದು ।
ಪರರಾಶೆಯೆಂಬ ಜ್ವರವ ಮಾಣಿಸು ॥೩॥
ಬಸವ ಪ್ರಿಯ ಕೂಡಲ ।
ಚನ್ನ ಸಂಗಮದೇವಾ ದೇವಾ ॥೪॥

(೩೪)

ರಾಗ:- ಮಿಶ್ರ ಪಹಾಡಿ     ತಾಲ:- ಕವ್ವಾಲಿ

(ಮಜ ಫಿರ ಫಿರುನಿ ...ಎಂಬಂತೆ)

ಸಂಸಾರವ ಬಿಟ್ಟುದೇ ।
ಆಚಾರವಯ್ಯಾ ಕಾಯದಿಚ್ಛೆಗೆ ॥

ಕಂಡವರಿಗೆ ಕಾರ್ಪಣ್ಯಬಡದಿಪ್ಪುದೇ ಶೀಲ ।
ಲಿಂಗಾಣತಿಯಿಂದ ಬಂದುದ ಕೈಕೊಂಬುದೇ ವ್ರತ॥
ಮನ ಘನವನಗಲದೆಪ್ಪುದೇ ಭಕ್ತಿ. ಸಕಳೇಶ
ದೇವಾ ನಿಮ್ಮ
ನರಿದವನೇ ಶರಣ ॥೧॥

(೬೫)

ರಾಗ:- ಸುಸಾರಂಗ ತಾಲ:- ತ್ರಿತಾಲ

(ರೀತ ರಂಜ ಭರಕೆ.... ಎಂಬಂತೆ)

ಲಂಚ ವಂಚನೆಗೆ ಕೈಯ್ಯಾನದ ಭಾಷೆ ।
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ ॥ಪ॥

ಕಯ್ಯ ಮುಟ್ಟಿ ಎತ್ತಿದೆನಾದೊಡೆ ।
ಅಯ್ಯಾ ನಿಮ್ಮಾಣೆ ನಿಮ್ಮ ಪ್ರಮಥರಾಣೆ ॥೧॥

ನೀನಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ ।
ಶಂಭು ಜಕ್ಕೇಶ್ವರ ದೇವಯ್ಯಾ ನಿಮ್ಮಾಣೆ ॥೨॥

(೬೬)

ರಾಗ:- ದುರ್ಗಾ ತಾಲ:- ತ್ರಿತಾಲ

(ಮನ ಮೋಹನ ಮುರಲೀವಾಲಾ ...ಎಂಬಂತೆ)

ಹೊಲೆಯು ಹೊಲಬಿಗನಾದೊಡೆ ।
ಅವನ ಹೊರೆಯಲಿಪ್ಪುದು ಲೇಸು ॥ಪ॥



ಹೊಲಬುಗೆಡದೆ ಲಿಂಗ ಶರಣೆನ್ನಿರಯ್ಯಾ ।
ಹೊಲಬುಗೆಡಬೇಡ ಶಿವಶರಣೆನ್ನಿರಯ್ಯಾ ।
ನಮ್ಮ ಕೂಡಲಸಂಗನ ಮಹಾ ಮನೆಯಲು ।

(೬೭)

ರಾಗ:- ಭೈರವಿ ತಾಲ:- ತ್ರಿತಾಲ

(ಹರನೇ ಗೋವಿನ ಜನ್ಮವು ಸಾಕು... ಎಂಬಂತೆ)

ಲೋಕದ ಡೊಂಕ ನೀವೇಕೆ ತಿದ್ದುವಿರಿ ।
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ॥ಪಲ್ಲ॥

ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ ।
ನೆರೆಪುನೆಯ ದು:ಖಕ್ಕೆ ಅಳುವರ ।
ಮೆಚ್ಚ ಕೂಡಲ ಸಂಗಮದೇವಾ ॥೧॥

(೬೮)

ರಾಗಿಣಿ:- ಜಯ ಜಯವಂತಿ ತಾಲ:- ದ್ರುತ ಏಕತಾಲ

ತಂದೆ ನೀನು, ತಾಯಿ ನೀನು
ಬಂಧು ನೀನು, ಬಳಗ ನೀನು ॥ಪ॥

ನೀನಲ್ಲದೆ ಮತ್ತಾರು, ಇಲ್ಲವಯ್ಯಾ ।
ಕೂಡಲ ಸಂಗಮದೇವಾ ಹಾಲಲದ್ದು
ನೀರಲದ್ದು ॥೧॥

(೬೯)

ರಾಗಃ- ಕಾಫಿ ತಾಳಃ- ತ್ರಿತಾಲ

(ರಾಮುಸಖಾ ಕುಣಿದಾವಾ.... ಎಂಬಂತೆ.)

ನಾದಪ್ರಿಯ ಶಿವನೆಂಬರು, ಅಯ್ಯಾ ||
ನಾದಪ್ರಿಯ ಶಿವನಲ್ಲಯ್ಯಾ |
ವೇದಪ್ರಿಯ ಶಿವನೆಂಬರು ||ಪ||

ವೇದಪ್ರಿಯ ಶಿವನಲ್ಲಯ್ಯಾ |
ನಾದವ ಮಾಡಿದ ರಾವಣಂಗೆ |
ಅರೆಯಾಯುಷ್ಯವಾಯಿತ್ತು |
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು |
ನಾದಪ್ರಿಯನು ಅಲ್ಲ, ವೇದಪ್ರಿಯನು ಅಲ್ಲ |
ಭಕ್ತಿಪ್ರಿಯ ಕೂಡಲಸಂಗಮದೇವಾ ||೧||

(೭೦)

ರಾಗಃ- ಮಿಶ್ರ ಪಹಾಡಿ ತಾಲ: ಕವಾಲಿ

(ರಾಮುವನಿ ಜಾಯಿ........ ಎಂಬಂತೆ)

ತನುವ ಬೇಡಿದಡೀವೆ | ಅಯ್ಯಾ ||
ಮನವ ಬೇಡಿದಡೀವೆ | ಅಯ್ಯಾ ||ಪಲ್ಲ||



ಧನವ ಬೇಡಿದಡೀವೆ ನಿಮ್ಮ ಶರಣರಿಗೆ |
ಎನಗೆ ಬೇಕೆಂಬ ಭಾವ |
ಮನದಲ್ಲಿ ಹೊಳೆದರೆ ಘನಮಹಿಮ |
ನಿಮ್ಮ ಶರಣರ ಪಾದದಾಣೆ, ಅಯ್ಯಾ ||೧||

ಮನವಚನ ಕಾಯದೊಳು ನೀನಲ್ಲದೆ |
ಮತ್ತೊಂದನರಿದಡೆ |
ಕೂಡಲಸಂಗಮದೇವಾ ಮತ್ತೆ |
ಮರಳಿ ಭವವೆಂಬ ಘೋರದಲ್ಲಿಕ್ಕಯ್ಯಾ ||೨||

(೭೧)

ರಾಗಃ ಮಿಶ್ರ ಪಹಾಡಿ. ತಾಲಃ ಕವಾಲಿ.

(ಜಮುನಾಮೆ ಕೈಸೆ ಜಾವು....ಎಂಬಂತೆ)

ತಾಳ ಮಾನ ಸರಸವನರಿಯೆ ||ಪ||

ಓಜೆ ಬಜಾವಣೆಯ ಲೆಕ್ಕವನರಿಯೆ |
ಅಮೃತಗಣ ದೇವಗಣವನರಿಯೆ ||೧||

ಕೂಡಲಸಂಗಮದೇವ ನಿನಗೆ |
ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ ||೨||

2778.

(೭೨)

ರಾಗಃ— ಜಯಜಯವಂತಿ. ತಾಲಃ-ತ್ರಿತಾಲ.

(ಮೋರಿ ಮಂದರ ಅಬಹುನಹಿ ಆಯೆ.... ಎಂಬಂತೆ.)

ಎನ್ನ ಕಾಯುವ ದಂಡಿಗೆಯು ಮಾಡಯ್ಯಾ ।
ಎನ್ನ ಶಿರವ ಸೋರೆಯ ಮಾಡಯ್ಯಾ ॥ಪ॥

ಎನ್ನ ನರವ ತಂತಿಯ ಮಾಡಯ್ಯಾ ।
ಎನ್ನ ಬೆರಳ ಕಡ್ಡಿಯ ಮಾಡಯ್ಯಾ ॥೧॥

ಬತ್ತೀಸ ರಾಗವ ಹಾಡಯ್ಯಾ ।
ಉರದಲೊತ್ತಿ ಬಾರಿಸು ಕೂಡಲಸಂಗಮ
ದೇವಾ ॥೨॥

ಲಿಂಗಾಯತ ಸಂಶೋಧನ ಕೇಂದ್ರ
780
4303
ಬೆಳಗಾವಿ
ನಾಗನೂರ ಶ್ರೀ ರುದ್ರಾಕ್ಷಿ ಮಠ